## ನರ್ಸರಿಗಳಿಗೆ ಲಗ್ಗೆಯಿಟ್ಟ ವೈವಿಧ್ಯಮಯ ಸಸಿಗಳು: ಖರೀದಿಗೆ ಮುಗಿಬಿದ್ದ ಜನ

# 'ಮುಂಗಾರಿನ ಮಳೆಗಾಲ' ಸಸ್ಯಪ್ರಿಯರಿಗೆ 'ಸಕಾಲ'



> ನಾನು ಮೂಲತಃ ಆಂಧ್ರಪ್ರದೇಶದವನಾಗಿದ್ದರೂ ಕಳೆದ 15 ವರ್ಷಗಳಿಂದ ನರ್ಸರಿ ಫಾರ್ಮ್ ನಡೆಸುತ್ತಿದ್ದೇನೆ. ಬೇಸಿಗೆಗಿಂತ ಮಳೆಗಾಲದಲ್ಲಿ ಸಸಿಗಳಿಗೆ ಹೆಚ್ಚಿನ ಬೇಡಿಕೆಯಿದ್ದು, ದಿನಕ್ಕೆ ಸುಮಾರು 2 ಸಾವಿರದಿಂದ 5 ಸಾವಿರ ರೂ. ವರೆಗೆ ವಹಿವಾಟು ನಡೆಯುತ್ತದೆ. ಅದರಲ್ಲೂ ಮಳೆಗಾಲದಲ್ಲಿ ಹೂವಿನ ಸಸಿಗಳಿಗೆ ಹೆಚ್ಚಿನ ಬೇಡಿಕೆ ಇರುತ್ತದೆ.
>
> -ಬಾಬು ಆಂಧ್ರಪ್ರದೇಶ,
> ನರ್ಸರಿ ಮಾಲೀಕರು

**ಸಂ.ಕ. ಸಮಾಚಾರ ಹುಬ್ಬಳ್ಳಿ**

ಮಳೆಗಾಲ ಆರಂಭವಾದರೆ ಸಾಕು ಪ್ರತಿಯೊಬ್ಬ ನಿಸರ್ಗ ಪ್ರೇಮಿಗೂ ಹಬ್ಬದೂಟ. ಅದರಲ್ಲೂ ಕೈದೋಟ ಪ್ರಿಯರಿಗೆ ಸಂಭ್ರಮವೋ ಸಂಭ್ರಮ. ತಮ್ಮ ಕೈತೋಟ ಸುಂದರಗೊಳಿಸಿ, ಅಂದಚಂದವಾಗಿ ಕಾಣುವಂತೆ ಮಾಡಬೇಕೆಂಬ ಮಹಾದಾಸೆ.

ಸಸ್ಯಪ್ರಿಯರ ಮಹಾದಾಸೆಗೆ, ಕನಸಿಗೆ ನೀರೆರೆಯುವುದು ಮುಂಗಾರು. ಆಗಸದಲ್ಲಿ ಮುಂಗಾರಿನ ವೈಭವ ಕಾಣುವುದೇ ತಡ ಜನತೆ ತಮಗಿಷ್ಟವಾದ ಸಸ್ಯ, ಹೂಗಿಡಗಳ ಹುಡುಕಾಟದಲ್ಲಿ ತೊಡಗುತ್ತಾರೆ. ಯಾವಾಗ ಹೂಗಿಡಗಳನ್ನು, ಮನೆಯಂಗಳದ ಸೌಂದರ್ಯ ಹೆಚ್ಚಿಸುವ ಸುಂದರ ಗಿಡಗಳನ್ನು ತಂದು ನಾಟಿ ಮಾಡೋದು [illegible]

ಸಸ್ಯಪ್ರಿಯರನ್ನು ಹೀಗೆ ಕೈಬೀಸಿ ಕರೆಯುತ್ತಿವೆ ನಗರದ ಆರ್ಟ್ಸ್ ಕಾಲೇಜು ಬಸ್ ನಿಲ್ದಾಣದ ಹಿಂಭಾಗದಲ್ಲಿರುವ ನರ್ಸರಿ, ಗೋಕುಲ ರಸ್ತೆಯಲ್ಲಿರುವ ನರ್ಸರಿಗಳು. ಅಷ್ಟೇ ಏಕೆ, ಸಂತೆಯಲ್ಲಿ ಮಾರಾಟಕ್ಕೆ ಆಗಮಿಸುವ ಸಸಿಗಳು ಸಹ ಇದಕ್ಕೆ ಹೊರತಾಗಿಲ್ಲ.

'ಕಳೆದ ವರ್ಷವೇ ಅಷ್ಟೊಂದು ಸಸಿ ತಂದಾಗಿದೆಯಲ್ಲ, ಮತ್ತೆ ಬೇಕಾ' ಎಂದು ಮನೆಯಲ್ಲಿ ಪತಿ ಕೇಳಿದರೆ. ಹೌದುರಿ, ಇನ್ನೂ ಸಲ್ಪ ಗಿಡಾ ತರಬೇಕು. ಹೇಳಿ ಕೇಳಿ ಮಳೆಗಾಲ ಈವಾಗ್ಲೆ ಸಸಿ ನೆಡಬೇಕು ಅಂತಾರೆ ಸಸ್ಯ ಪ್ರೇಮಿಗಳು.

**ಒಂದೇ ಸೂರಿನಡಿ...**

ನಗರದಲ್ಲಿ ಸಾಕಷ್ಟು ನರ್ಸರಿ ಫಾರ್ಮ್‌ಗಳಿದ್ದು, ಕಡಿಮೆ ಬೆಲೆಯಿಂದ ಹೆಚ್ಚಿನ ಬೆಲೆವರೆಗೂ ವಿವಿಧ ಬಗೆಯ ತರೇಹವಾರಿ ಸಸಿಗಳು ಇಲ್ಲಿ ದೊರೆಯುತ್ತವೆ. ಹಣ್ಣಿನ ಸಸಿಗಳಲ್ಲಿ ತೆಂಗು, ಮಾವು, ಚಿಕ್ಕು, ಪೇರಲ, ಸೀತಾಫಲ, ದಾಳಿಂಬೆ, ನಿಂಬೆ, ವಾಟರ್ ಆ್ಯಪಲ್, ಅಂಜೂರ, ನೆಲ್ಲಿಕಾಯಿ, ನೇರಳೆ ಹಾಗೂ ಹೂವಿನ ಸಸಿಗಳಲ್ಲಿ ಗುಲಾಬಿ, ಮಲ್ಲಿಗೆ, ದಾಸವಾಳ, ಸೇವಂತಿಗೆ, ಕನಕಾಂಬರಿ, ಚೆಂಡು, ಸೇವಂತಿ, ಪಾರಿಜಾತ, ಟೇಬಲ್‌ರೋಸ್ ದೊರೆಯುತ್ತವೆ. ಇನ್ನು ಅಂದದ ಮನೆಯನ್ನು ಚೆಂದವಾಗಿಸಲು ಪಾಮ್ ಟ್ರೀಸ್, ಪೆಡ್ರಾಕಾಟನ್, ಶೋಲಾಶಿಯಾ, ಗಜೇನೀಯಾ, ಗೋಲ್ಡನ್ ಝುಣಿಫಾರ್, ಅಶೋಕಾ, ಪೈಥಾಸ್, ಕ್ರಿಸ್‌ಮಸ್, ಆರ್. ಕೆ. ಪಾಮ್, ಫಾರೀನ್, ಮನಿ ಪ್ಲಾಂಟ್, ಡ್ರಸೀನಾ, ಡಿಪಿನ್‌ಬೆಗಿಯಾ, ದುರಂತಾ, ಮಿಚ್ಚಿಮೇರಿಗೋಲ್ಡ್‌ಮ ಫಾಸ್ಟೇಲಿಯಾ, ಲಕ್ಕಿ ಬ್ಯಾಂಬೊ ಸೇರಿದಂತೆ ವಿವಿಧ ಬಗೆಯ ಸಸಿಗಳು ಒಂದೆ ಸೂರಿನಡಿ ದೊರೆಯುತ್ತವೆ.

**ಹೆಚ್ಚಿನ ಬೇಡಿಕೆ...**

ಸಾಮಾನ್ಯವಾಗಿ ಮಹಿಳೆಯರು ಗುಲಾಬಿ ಗಿಡಗಳನ್ನು ಇಷ್ಟಪಡುತ್ತಾರೆ. ಅಲ್ಲದೆ, ತಮ್ಮ ಮನೆಯ ಅಂದ ಚೆಂದಕ್ಕೆ ಸಸಿ ಹುಡುಕುವವರು ಅಲಂಕಾರಿಕ ಸಸಿಗಳನ್ನು ಹೆಚ್ಚು ಇಷ್ಟ ಪಡುತ್ತಾರೆ. ಹೀಗಾಗಿ ಗುಲಾಬಿ ಗಿಡಗಳಿಗೆ ಹೆಚ್ಚಿನ ಬೇಡಿಕೆಯಿದ್ದು ಜೊತೆಗೆ ದಾಸವಾಳ, ಸೇವಂತಿ, ಸಂಪಿಗೆ, ಲಕ್ಕಿ ಬ್ಯಾಂಬೊ, ತೆಂಗು ಹಾಗೂ ಕೋ ಸಸಿಗಳಿಗೆ ಹೆಚ್ಚಿನ ಬೇಡಿಕೆಯಿದೆ.

**ಮಾರಾಟ ಜೋರು_**

ಮಳೆಗಾಲ ಆರಂಭವಾದರೆ ಸಾಕು, ನರ್ಸರಿ ಫಾರ್ಮ್‌ನ ಮಾಲಿಕರಿಗೆ ಕೆಲಸ ಹೆಚ್ಚಾಗುತ್ತದೆ. ಕಾರಣ ಪುಣೆ, ಆಂಧ್ರಪ್ರದೇಶ, ಬೆಳಗಾವಿ ಸೇರಿದಂತೆ ವಿವಿಧಡೆಯಿಂದ ಸಸಿ ಆಮದು ಮಾಡಿಕೊಳ್ಳಲಾಗುತ್ತದೆ. ಹೀಗೆ ಬೇರೆಡೆಯಿಂದ ಬಂದ ಸಸಿಗಳನ್ನು ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಮಾರಾಟ ಮಾಡಲಾಗುತ್ತದೆ. ಅದರಲ್ಲಿ ಚಿಕ್ಕ ಸಸಿಗಳು 30 ರೂ.ನಿಂದ 100 ರೂ. ವರೆಗೆ ದೊರೆಯುತ್ತವೆ. ಇನ್ನು ಹೂವಿನ ಸಸಿಗಳು 60 ರೂ.ನಿಂದ 500 ರೂ. ವರೆಗೂ ಲಭ್ಯ. ಅಲ್ಲದೆ, ಅಲಂಕಾರಿಕ ಸಸಿಗಳಿಗೂ ಹೆಚ್ಚಿನ ಬೇಡಿಕೆಯಿದ್ದು 50 ರಿಂದ 1 ಸಾವಿರ ರೂ.ವರೆಗೂ ನಮ್ಮಲ್ಲಿ ದೊರೆಯುತ್ತವೆ ಎನ್ನುತ್ತಾರೆ ನರ್ಸರಿಯ ಮಾಲೀಕ ಬಾಬು.

-ಸುಷ್ಮಾ ಪವಾರ

Scanned with CamScanner